ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1031 (1244)
2. ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 17-03-2020.
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

<table>
<tr><th>ಕ್ರಮ. ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ KUIDFC ವತಿಯಿಂದ ಅನುಷ್ಠಾನಗೊಳಸಲಾಗುತ್ತಿರುವ 'ಜಲಶ್ರೀ' ಯೋಜನೆಯಡಿ 24X7 ಸಮಯ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಆಯ್ಕೆಗೊಂಡಿರುವ ಪಟ್ಟಣ ಪ್ರದೇಶಗಳು ಯಾವುವು; ಮತ್ತು ಅವುಗಳ ಅನುಷ್ಠಾನಕ್ಕೆ ಹಂಚಿಕೆ ಮಾಡಲಾಗಿರುವ ಆರ್ಥಿಕ ನೆರವು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಕೆಯುಐಡಿಎಫ್‌ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಕಾರ್ಯಕ್ರಮದಡಿ (ಕ್ವಿಮಿಪ್) ರಾಜ್ಯದ ಆಯ್ದ 8 ಪಟ್ಟಣ/ನಗರ/ ಮಹಾನಗರ ಪಾಲಿಕೆಗಳಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. ಕ್ವಿಮಿಪ್ ಕಾರ್ಯಕ್ರಮವನ್ನು 'ಜಲಸಿರಿ' ಎಂದು ಹೆಸರಿಡಲಾಗಿದೆ. ಕ್ವಿಮಿಪ್ ಕಾರ್ಯಕ್ರಮವನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು, ಟ್ರಾಂಚ್-1 ರಲ್ಲಿ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ 4 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.

ಟ್ರಾಂಚ್-2 ರಲ್ಲಿ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ 4 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.

ಸದರಿ ಕಾರ್ಯಕ್ರಮದಡಿಯಲ್ಲಿ 24X7 ಸಮಯ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಆಯ್ಕೆಗೊಂಡಿರುವ ಪಟ್ಟಣ ಪ್ರದೇಶಗಳು ಮತ್ತು ಅವುಗಳ ಅನುಷ್ಠಾನಕ್ಕೆ ಹಂಚಿಕೆ ಮಾಡಲಾಗಿರುವ ಆರ್ಥಿಕ ನೆರವಿನ/ವೆಚ್ಚದ ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ. ಸಂ</th><th>ಟ್ರಾಂಚ್</th><th>ನಗರ/ಪಟ್ಟಣ</th><th>ಗುತ್ತಿಗೆಯ ಮೊತ್ತ -(ಕಾರ್ಯಾಚರಣೆ & ನಿರ್ವಹಣೆ ಹೊರತು ಪಡಿಸಿ) (ಕೋಟಿಗಳಲ್ಲಿ)</th></tr>
<tr><td>1</td><td>ಟ್ರಾಂಚ್-1</td><td>ದಾವಣಗೆರೆ</td><td>468.25</td></tr>
<tr><td>2</td><td></td><td>ಹರಿಹರ</td><td>45.6</td></tr>
<tr><td>3</td><td></td><td>ಬ್ಯಾಡಗಿ</td><td>28.62</td></tr>
<tr><td>4</td><td></td><td>ರಾಣೆಬೆನ್ನೂರು</td><td>119.21</td></tr>
<tr><td>5</td><td>ಟ್ರಾಂಚ್-2</td><td>ಮಂಗಳೂರು</td><td>587.67</td></tr>
<tr><td>6</td><td></td><td>ಉಡುಪಿ</td><td>102.88</td></tr>
<tr><td>7</td><td></td><td>ಪುತ್ತೂರು</td><td>71.5</td></tr>
<tr><td>8</td><td></td><td>ಕುಂದಾಪುರ</td><td>23.10</td></tr>
</table></td></tr>
<tr><td>ಆ)</td><td>ಈ ಯೋಜನೆಗೆ ಸೇರ್ಪಡೆಯಾಗಿರುವ ಪಟ್ಟಣ ಪ್ರದೇಶಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ; (ವಿವರ ಒದಗಿಸುವುದು)</td><td>ಸದರಿ ಯೋಜನೆಯನ್ನು ಸಮಗ್ರ ನೀರು ನಿರ್ವಹಣೆ ಆಧಾರದ ಅನುಸಾರ ಅನುಷ್ಠಾನಗೊಳಸುತ್ತಿದ್ದು, ಈ ಹಿನ್ನಲೆಯಲ್ಲಿ ಟ್ರಾಂಚ್-1 ರಲ್ಲಿ 4ನಗರ/ಪಟ್ಟಣಗಳನ್ನು ತುಂಗಭದ್ರಾ ಜಲಾಯನಯನ ಪ್ರದೇಶದ ನಗರಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು, ಬ್ಯಾಡಗಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.</td></tr>
</table>

		ಅದೇ ರೀತಿ ಕರಾವಳಿ ಪ್ರದೇಶದ ನಗರಗಳಾದ ಮಂಗಳೂರು, ಪುತ್ತೂರು, ಉಡುಪಿ, ಕುಂದಾಪುರಗಳನ್ನು ಆಯ್ಕೆ ಮಾಡಲಾಗಿದೆ. (ಒಂದು ಮಹಾನಗರಪಾಲಿಕೆ, ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ಒಂದು ನಗರಸಭೆ, ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯ ಒಂದು ನಗರಸಭೆ, ಒಂದು ಪುರಸಭೆ ಮಾದರಿಯಲ್ಲಿ) ಸರ್ಕಾರದ ಮಟ್ಟದಲ್ಲಿ ಚರ್ಚಿತವಾಗಿ ಅನುಮೋದನೆಗೊಂಡಿರುತ್ತದೆ.
ಇ)	ಈ ಯೋಜನೆಯಡಿ ಆಯ್ಕೆ ಆಗಿರುವ ಪಟ್ಟಣ ಪ್ರದೇಶಗಳಲ್ಲಿ ಕಾಮಗಾರಿಗಳ ಅನುಷ್ಠಾನ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಈ ಯೋಜನೆಯಡಿ ಆಯ್ಕೆ ಆಗಿರುವ ಪಟ್ಟಣ ಪ್ರದೇಶಗಳಲ್ಲಿ ಕಾಮಗಾರಿಗಳ ಅನುಷ್ಠಾನದ ಸಂಪೂರ್ಣ ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ.
ಈ)	ಈ ಯೋಜನೆಯಡಿ ಆಯ್ಕೆ ಮಾಡಿರುವ ಹಲವಾರು ಪಟ್ಟಣ ಪ್ರದೇಶಗಳು ಕೇಂದ್ರ ಸರ್ಕಾರದ 'ಅಮೃತ್' ಯೋಜನೆಯಡಿ ಕುಡಿಯುವ ನೀರಿನ ವರ್ದನೆ ಕಾರ್ಯಕ್ರಮದಲ್ಲಿ ಕೈಗೊಂಡಿದ್ದು ಈ ಪಟ್ಟಣಗಳನ್ನು ಮತ್ತೊಮ್ಮೆ 'ಜಲಶ್ರೀ' ಯೋಜನೆಯಡಿ ಸೇರಿಸುವುದು ಸರಿಯೇ: (ಸಂಪೂರ್ಣ ಮಾಹಿತಿ ನೀಡುವುದು)	ಏಡಿಬಿ ನೆರವಿನ ಜಲಸಿರಿ ಕಾರ್ಯಕ್ರಮದಲ್ಲಿ ಆಯ್ಕೆ ಮಾಡಿರುವ ನಗರ/ಪಟ್ಟಣಗಳಲ್ಲಿ ಕುಡಿಯುವ ನೀರು ಯೋಜನೆಗೆ ಕೊರತೆಯಾಗುವ ಹಣವನ್ನು ಅಮೃತ್ ಕಾರ್ಯಕ್ರಮದಡಿಯಲ್ಲಿ ಪಡೆಯಲಾಗಿದ್ದು, ಅಮೃತ್ ಸಹಯೋಗದೊಂದಿಗೆ ಜಲಸಿರಿ ಯೋಜನೆಯಡಿ ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಟಾನಗೊಳಸಲಾಗುತ್ತಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ: 1. ದಾವಣಗೆರೆ ನಗರದಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು (8 ವರ್ಷಗಳ ನಿರ್ವಹಣೆಯೊಂದಿಗೆ) ರೂ.677.96 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.174.96 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ. 2. ರಾಣೆಬೆನ್ನೂರು ನಗರದಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು (8 ವರ್ಷಗಳ ನಿರ್ವಹಣೆಯೊಂದಿಗೆ) ರೂ.139.21 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.96.36 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ. 3. ರಾಣೆಬೆನ್ನೂರು ನಗರದಲ್ಲಿ ಗಂಗಾಜಲ ದೊಡ್ಡ ಕೆರೆಯ ಪುನರುಜ್ಜೀವನ ಕಾಮಗಾರಿಯನ್ನು ರೂ.29.83 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.19.87 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ. 4. ಮಂಗಳೂರಿನಲ್ಲಿ ಸಗಟು ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಯನ್ನು ರೂ.35.51 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.32.51 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ. 5. ಉಡುಪಿ ನಗರದಲ್ಲಿ ಸಗಟು ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಯನ್ನು ರೂ.119.51 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.122.50 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ.

		6. ಉಡುಪಿ ನಗರದಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು (8 ವರ್ಷಗಳ ನಿರ್ವಹಣೆಯೊಂದಿಗೆ) ರೂ.172.98 ಕೋಟಿಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದ್ದು, ಇದರಲ್ಲಿ ರೂ.9.03 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ. ಸದರಿ ನಗರಗಳಲ್ಲಿ ಶೇ 100 ರಷ್ಟು ನಳ ಸಂಪರ್ಕಗಳೊಂದಿಗೆ 24/7 ಕುಡಿಯುವ ನೀರು ಸರಬರಾಜು ಒದಗಿಸಲು ಉದ್ದೇಶಿಸಲಾಗಿದ್ದು, 30 ವರ್ಷದ ನೀರಿನ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಗೊಳಸಲಾಗಿದ್ದು, ಜಲಸಿರಿ ಯೋಜನೆಯಡಿ ಅನುಷ್ಠಾನಗೊಳಸುತ್ತಿರುವ ಕಾಮಗಾರಿಗಳಗೆ ಕೊರತೆಯಾಗುವ ಹಣವನ್ನು ಸರಿದೂಗಿಸಲು ಅಮೃತ್ ಯೋಜನೆಯಿಂದ ಒದಗಿಸಿದೆ.
ಉ)	ಮುಂದುವರೆದ 'ಜಲಶ್ರೀ' ಯೋಜನೆ – ಯಡಿಯಲ್ಲಿ ರಾಜ್ಯದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವ ಹಾಗೂ ಭೂಮಿಯ ನೀರಿನ ಮಟ್ಟ ಕರಗುತ್ತಿರುವ ಜಿಲ್ಲೆಗಳಲ್ಲಿನ ಪಟ್ಟಣಗಳನ್ನು ಸೇರಿಸಲು ಸರ್ಕಾರ ಚಿಂತಿಸಿದಿಯೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು?	ಜಲಸಿರಿ ಯೋಜನೆಯು ಎಡಿಬಿ ನೆರವಿನ ಕಾರ್ಯಕ್ರಮವಾಗಿದ್ದು, ಆಯ್ದ 8 ನಗರಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. ರಾಜ್ಯದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವ ಹಾಗೂ ಭೂಮಿಯ ನೀರಿನ ಮಟ್ಟ ಕರಗುತ್ತಿರುವ ಜಿಲ್ಲೆಗಳಲ್ಲಿನ ಪಟ್ಟಣಗಳನ್ನು ಸೇರಿಸಲು ಪ್ರಸ್ತುತ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಕಡತ ಸಂಖ್ಯೆ: ನಅಇ 87 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.